

# ಬೆಳಕಿನ ನೆರಳು

## ಮಹಾತ್ಮ ಮತ್ತು ಹರಿಲಾಲ್

■ ಮೂಲ: **ದಿನಕರ್ ಜೋಶಿ**
■ ಕನ್ನಡಕ್ಕೆ: **ಡಿ.ಎನ್. ಶ್ರೀನಾಥ್**
ಕಲೆ: ಮನೋಹರ ಆಚಾರ್ಯ

## ಈಗ ಹರಿಲಾಲ ಅಲ್ಲ; ಹೀರಾಲಾಲ

ಕಡೆಗೆ ಆರ್ಯಸಮಾಜದ ತಿಳಿಮಾತುಗಳಿಂದ ಹಾಗೂ ಮನಸ್ಸಿನ ತಳಮಳದಿಂದ ಹರಿಲಾಲ ಒಂದು ತೀರ್ಮಾನಕ್ಕೆ ಬಂದ. ಮುಂಬೈ ನೆಲದಲ್ಲಿ ಮನಸಾರೆ ಮಳೆಗೆರದ ನಂತರ ಮೋಡಗಳು ಬೀಳ್ಕೊಂಡಿದ್ದವು. ಚಳಿಗಾಲದ ತಣ್ಣನೆಯ ಗಾಳಿ ಇನ್ನೂ ಕಾಲಿಟ್ಟಿರಲಿಲ್ಲ, ಇಂಥ ಒಂದು ದಿನ ಬೆಳಿಗ್ಗೆಯ ವೇಳೆಯಲ್ಲಿ ಹರಿಲಾಲ ಆರ್ಯಸಮಾಜ ಏರ್ಪಡಿಸಿದ್ದ ಮತ್ತು ನಿಶ್ಚಯಿಸಿದ್ದ ಸಂಸ್ಕಾರವನ್ನು ಸ್ವೀಕರಿಸಿ ಮತ್ತೆ ಹಿಂದೂ ಧರ್ಮಕ್ಕೆ ಬಂದ. ಇಸ್ಲಾಮ್ ಧರ್ಮವನ್ನು ತ್ಯಜಿಸುವ ಹಾಗೂ ಹಿಂದೂ ಧರ್ಮವನ್ನು ಹೀಗೆ ಮತ್ತೆ ಸ್ವೀಕರಿಸಿದ ಕಾರಣಗಳನ್ನು ಸ್ಪಷ್ಟಪಡಿಸುತ್ತಾ ಹರಿಲಾಲ ಮರುದಿನ ಒಂದು ಸಾರ್ವಜನಿಕ ಘೋಷಣೆಯನ್ನು ಮಾಡಿದ

‘...ಇಂದು ಯಾವುದನ್ನು ಧರ್ಮವೆಂದು ಹೇಳಲಾಗುವುದೋ, ಅದರಲ್ಲಿ ಸಿದ್ಧಂತಗಳ ಸಮಾವೇಶ ಮಾತ್ರವಲ್ಲ, ಅದನ್ನು ನಂಬುವವರ ಸಂಸ್ಕೃತಿ ಮತ್ತು ಸಾಮಾಜಿಕ ಹಾಗೂ ನೈತಿಕ ಜೀವನವೂ ಬರುತ್ತವೆ. ಇಸ್ಲಾಮ್ ಧರ್ಮದ ನನ್ನ ಅನುಭವಗಳು, ಹಿಂದೂಗಳ ವೈದಿಕ ಧರ್ಮದ ಸಿದ್ಧಾಂತ ಮತ್ತು ಸಾಮಾಜಿಕ ಹಾಗೂ ನೈತಿಕ ಜೀವನ, ಇಸ್ಲಾಮ್ ಮತ್ತು ಇನ್ನಿತರ ಧರ್ಮಗಳ ಹೋಲಿಕೆಯಲ್ಲಿ ತುಂಬಾ ಶ್ರೇಷ್ಠ ಎಂಬುದನ್ನು ನನಗೆ ಕಲಿಸಿವೆ. ಇಸ್ಲಾಮಿನ ಕೆಲವು ಸತ್ವಗಳು ವೈದಿಕ ಧರ್ಮದಿಂದಲೇ ಅಲ್ಲಿಗೆ ಹೋಗಿವೆ. ನನ್ನ ಸಂಪರ್ಕಕ್ಕೆ ಬಂದ ಕೆಲವು ಮುಸಲ್ಮಾನರು, ಇಸ್ಲಾಮಿನ ಮೂಲ ಆದೇಶಗಳು ಮತ್ತು ಧಾರ್ಮಿಕ ಸಿದ್ಧಂತಗಳಿಂದ ತುಂಬಾ ದೂರವಿರುತ್ತಾರೆ. ಇದರಿಂದಾಗಿ ನಾನು ಯಾವುದೇ ರೂಪದಲ್ಲೂ ಇಸ್ಲಾಮಿನ ಸೇವೆಯನ್ನು ಮಾಡಲಾರೆ ಎಂದು ಅನ್ನಿಸಿತು. ಅದಕ್ಕಾಗಿಯೇ ಮತ್ತೆ ಉರುಳಿದ ಮನುಷ್ಯನಂತೆ ಏಣಿ ಏರಿ ಮರಳಿ ಜಾಗಕ್ಕೆ ಹೋಗಲು ಪ್ರಯತ್ನಿಸುತ್ತಿದ್ದೇನೆ. ಒಂದು ವೇಳೆ ಈ ಸುದ್ದಿ ಕೇಳಿ ನನ್ನ ತಂದೆ ತಾಯಿ, ಪರಿವಾರದ ಸದಸ್ಯರು ಮತ್ತು ಇನ್ನಿತರ ಸಂಬಂಧಿಕರಿಗೆ ಸಂತೋಷವಾದರೆ, ಅವರು ನನಗೆ ಆಶೀರ್ವದಿಸಲಿ. ಕೊನೆಯಲ್ಲಿ, ಅವರು ನನ್ನನ್ನು ಕ್ಷಮಿಸಲಿ, ನನ್ನ ಮೇಲೆ ದಯೆತೋರಲಿ ಎಂದಷ್ಟೇ ಯಾಚಿಸುತ್ತೇನೆ.’

***

ಅಬ್ದುಲ್ಲಾ ಆದ ನಂತರ ಹರಿಲಾಲ ಇಸ್ಲಾಮಿನ ಪ್ರಚಾರಕನಾಗಿದ್ದ, ಅದರಂತೆಯೇ ಹಿಂದೂ ಆದ ನಂತರ ತಕ್ಷಣವೇ ಆರ್ಯಸಮಾಜವು ಅವನಿಗೆ ಒಂದು ವಿಶೇಷ ಕೆಲಸವನ್ನು ವಹಿಸಿತು. ಹಿಂದೂ ಆದ ಅಬ್ದುಲ್ಲಾನಿಗೆ ಹೊಸದಾಗಿ ನಾಮಕರಣವನ್ನು ಸಹ ಮಾಡಲಾಯಿತು. ಹರಿಲಾಲ್ ಗಾಂಧಿ ಈಗ ಅಬ್ದುಲ್ಲಾ ಗಾಂಧಿಯಾಗಿರದೆ, ಹೀರಾಲಾಲ್ ಗಾಂಧಿಯಾದ; ಹೀರಾಲಾಲ್ ಆದ ಹರಿಲಾಲನಿಗೆ ದಿಲ್ಲಿಯ ಭಾರತೀಯ ಶ್ರದ್ಧಾನಂದ ಶುದ್ಧಿ ಸಭೆಯು ಮಿಶನರಿಯ ಪದವಿಗೆ ಪ್ರಸ್ತಾಪಿಸಿತು. ಈಗ ಅವನು ಆ ಶುದ್ಧಿಸಭೆಯ ಮಿಶನರಿಯಾದ.

ಹರಿಲಾಲನ ಈ ಎಲ್ಲಾ ಚೇಷ್ಟೆಗಳು ಈಗ ಯಾರಿಂದಲೂ ಮುಚ್ಚುಮರೆಯಾಗಿರಲು ಸಾಧ್ಯವಿರಲಿಲ್ಲ. ಬಾಪೂ ಅವರಿಗೆ ಈ ಸುದ್ದಿ ತಿಳಿಯಿತು; ಅವರು ಹರಿಲಾಲ ಮತ್ತೆ ಮತಾಂತರಕ್ಕೆ ಸಂಬಂಧಿಸಿದ ಸಾರ್ವಜನಿಕ ನಿವೇದನೆಯನ್ನು ಓದಿದರು, ಆಗ ಅವರ ಮನಸ್ಸಿನಲ್ಲಿ ಮತ್ತೆ ಅಲ್ಪಸ್ವಲ್ಪ ಕೋಲಾಹಲವುಂಟಾಯಿತು. ಹರಿಲಾಲ ಈ ದಿನಗಳಲ್ಲಿ ಎಂಥ ಭ್ರಮೆಯಲ್ಲಿ ದಿನಗಳನ್ನು ಕಳೆಯುತ್ತಿದ್ದಾನೆ ಎಂಬುದನ್ನು ಬಾಪೂ ಅವರು ಅರ್ಥ ಮಾಡಿಕೊಂಡಿದ್ದರು. ಹರಿಲಾಲನ ಪದೇ ಪದೇ ಇಂಥ ಹೇಳಿಕೆಗಳು ಮತ್ತು ಕಾರ್ಯಗಳನ್ನು ಕೇಳಿ ಬಾ ಅವರ ವ್ಯಥೆ ದಿನೇದಿನೇ ಹೆಚ್ಚುತ್ತಿತ್ತು. ತಮ್ಮ ಬಗ್ಗೆ ಮಗನಿಗೆ ರೋಷವಿದೆ, ಸಿಟ್ಟಿದೆ ಎಂಬುದು ಬಾಪೂ ಅವರಿಗೆ ತಿಳಿದಿತ್ತು. ಆದರೆ ಆ ಸಿಟ್ಟಿನ ಭರದಲ್ಲಿ ಅವನಿಡುತ್ತಿದ್ದ ಹೆಜ್ಜೆಗಳು ಬಾ ಅವರ ಪರಿಸ್ಥಿತಿಯನ್ನು ಶೋಚನೀಯಗೊಳಿಸುತ್ತಿದ್ದವು. ಬಾಪೂ ಅವರು ಎಲ್ಲಾ ವಿಷಯಗಳನ್ನು ಅವಲೋಕಿಸಿ ಹರಿಲಾಲನ ಹೆಸರಿಗೊಂದು ಪತ್ರವನ್ನು ಬರೆದರು. ಹರಿಲಾಲನ ಇಂಥ ನಿವೇದನೆಗಳು ಮತ್ತು ಕೆಲಸಗಳು ಎಷ್ಟು ಅನರ್ಥಕಾರಿಯಾಗಿವೆ ಎಂಬುದನ್ನು ಬಾಪೂ ಅವರು ವಿಸ್ತಾರವಾಗಿ ಉಲ್ಲೇಖಿಸಿದರು.

ಹರಿಲಾಲ ಈ ಪತ್ರವನ್ನು ಓದಿದ ನಂತರ ಮತ್ತೊಮ್ಮೆ ಅವನ ಮನಸ್ಸಿನಲ್ಲಿ ತೀಕ್ಷ್ಣವಾದ ರೋಷ ಹುಟ್ಟಿತು. ಬಾಪೂ ತನ್ನ ಯಾವ ಮಾತನ್ನೂ ಸಹ ಎಂದೂ ಸರಿಯಾಗಿ ಅರ್ಥ ಮಾಡಿಕೊಳ್ಳಲಾರರು ಅಥವಾ ಒಪ್ಪಿಕೊಳ್ಳಲಾರರು ಎಂದು ವಿಶ್ವಾಸ ಮೂಡಿತು. ಅಲ್ಲದೆ ಬಾಪೂ ಅವರು ಬಾ ಅವರಿಗೆ ಬರೆದ ಪತ್ರದಿಂದ ಹರಿಲಾಲ ಮತ್ತೊಮ್ಮೆ ಬೆಂಕಿಯಾದ. ಬಾ ಅವರು ಬಾಪೂ ಅವರ ನೆರಳಿನಂತೆ. ಬಾಪೂ ಅವರು ಬಾ ಅವರ